# ಚಾಮುಂಡಿಬೆಟ್ಟ ದಿವ್ಯ ಸನ್ನಿಧಿ

**ಎ.ಪಿ. ಶ್ರೀಕಂಠರಾಜೇ ಅರಸ್**

**ಮೈಸೂರು ಎಂದಾಕ್ಷಣ ಚಾಮುಂಡಿ ಬೆಟ್ಟದ ನೆನಪಾಗುತ್ತದೆ. ಆ ನೆನಪು ಸಫಲತೆಯನ್ನು ಪಡೆಯಬೇಕಾದರೆ ನೆನಪಿನ ವಸ್ತುವಿನ ಬಗ್ಗೆ ಹೆಚ್ಚು ಮಾಹಿತಿಯನ್ನು ಪಡೆಯುವುದು ಆವಶ್ಯಕ. ಈ ಆವಶ್ಯಕತೆಯನ್ನು ಪೂರೈಸಿರುವ ಶ್ರೀ ಶ್ರೀಕಂಠರಾಜೇ ಅರಸ್ ಅವರು ಪತ್ರಿಕೋದ್ಯಮದಲ್ಲಿ ಆಸಕ್ತಿಯುಳ್ಳವರು.**

## ಐತಿಹಾಸಿಕ ಹಿನ್ನೆಲೆ

ಮೈಸೂರು ಒಡೆಯರ ರಾಜಧಾನಿಯಾಗಿದ್ದ ಮೈಸೂರು ಪಟ್ಟಣವು ವೈಭವೋಪೇತವಾದ ನಗರ. ಈ ಸುಂದರ ನಗರಕ್ಕೆ ಹೊಂದಿಕೊಂಡಂತೆ ಚಾಮುಂಡಿ ಬೆಟ್ಟವು ಸಮುದ್ರಮಟ್ಟಕ್ಕಿಂತ ಸುಮಾರು ೩೪೮೯ ಅಡಿಗಳ ಎತ್ತರದಲ್ಲಿ ಕಂಗೊಳಿಸುತ್ತಾ, ಮೈಸೂರು ನಗರಕ್ಕೆ ಶಿಖರಪ್ರಾಯವಾಗಿದೆ. ಸುತ್ತಲೂ ಬಯಲಿದ್ದು ಒಂಟಿಯಾಗಿ ನಿಂತಿರುವ ಕಡಿದಾದ ಈ ಬೆಟ್ಟವು ಬಹು ದೂರದ ವರೆಗೂ ಗೋಚರಿಸುವುದಲ್ಲದೆ, ಬೆಟ್ಟದ ಮೇಲೆ ನಿಂತು ನೋಡಿದಾಗ ಮೈಸೂರಿನ ಹರವು ಮತ್ತು ಸುತ್ತಲಿನ ಪ್ರಕೃತಿಸೌಂದರ್ಯ ರಮ್ಯವಾಗಿ ಕಾಣಿಸುತ್ತದೆ. ಈ ಚಾಮುಂಡಿ ಬೆಟ್ಟದ ತುದಿಯಲ್ಲಿ ಜಗನ್ಮಾತೆಯಾದ ಮಹಿಷಾಸುರ ಮರ್ದಿನಿ ಶ್ರೀ ಚಾಮುಂಡೇಶ್ವರಿ ದೇವಿಯು ವಿರಾಜಮಾನಳಾಗಿದ್ದಾಳೆ. ಜಗಜ್ಜನನಿಯಾದ ಶ್ರೀ ವೈಷ್ಣವೀ ದೇವಿಯು ಶ್ರೀಚಾಮುಂಡೇಶ್ವರಿ ಎಂಬುದಾಗಿ ಪ್ರಖ್ಯಾತಳಾಗಿ ಈ ಪರ್ವತದಲ್ಲಿ ನೆಲೆಸಿದ್ದಾಳೆ.

ಚಾಮುಂಡಿ ಬೆಟ್ಟವನ್ನು ೧೦೦೦ ಮೆಟ್ಟಿಲುಗಳನ್ನು ಹತ್ತಿಬಂದು, ಅಥವಾ ವಾಹನಗಳಲ್ಲಿ ಬಂದು, ಚಾಮುಂಡಿಯ ದೇವಾಲಯವನ್ನು ಪ್ರವೇಶಿಸುತ್ತಿದ್ದಂತೆಯೆ ನಾಸ್ತಿಕರೂ ಸಹ ಆಸ್ತಿಕರಾಗಿ ಪರವಶರಾಗುತ್ತಾರೆ ಎಂಬ ಮಾತಿದೆ. ಅಂತೆಯೇ ತಾವು ಯಾವುದೋ ಬೇರೆ ಲೋಕಕ್ಕೆ ಬಂದಿದ್ದೇವೆಯೋ ಎನ್ನುವಂತಹ ಅನುಭವವಾಗುತ್ತದೆ. ಮಾನಸಿಕವಾದ ಅಶಾಂತಿಗಳೆಲ್ಲವೂ ದೂರವಾಗಿ ಪ್ರಶಾಂತವಾದ ಮನಸ್ಸನ್ನು ಹೊಂದಲು ಈ ದೇವಿಯ ಸನ್ನಿಧಿಗೆ ಹೋಗುವುದೇ ಉತ್ತಮವೆನಿಸುತ್ತದೆ. ಈ ಬೆಟ್ಟದ ನೈಸರ್ಗಿಕ ಸೊಬಗು ಪ್ರೇಕ್ಷಕರ ಕಣ್ಣು ಮತ್ತು ಮನಸ್ಸುಗಳಿಗೆ ಆನಂದ, ಸಂತೋಷ, ನೆಮ್ಮದಿ,ಶಾಂತಿಗಳನ್ನು ನೀಡುತ್ತದೆ. ಇಲ್ಲಿ ಪವಿತ್ರ ಹಾಗೂ ಉತ್ಕೃಷ್ಟ ವಾತಾವರಣವಿದ್ದುದರಿಂದಲೇ ಒಂದಾನೊಂದು ಕಾಲದಲ್ಲಿ ಚಿರಂಜೀವಿಗಳಾದ ಮಾರ್ಕಂಡೇಯರೇ ಮೊದಲಾದ ಮಹರ್ಷಿಗಳು, ದೇವತೆಗಳು ಇಲ್ಲಿ ತಪಸ್ಸು ಮಾಡಿ ಸಿದ್ಧಿ ಪಡೆದರೆಂದು ಶಾಸನಗಳು ತಿಳಿಸುತ್ತವೆ.

ಶ್ರೀ ಚಾಮುಂಡೇಶ್ವರಿ ದೇವಾಲಯ ಹಾಗೂ ಚಾಮುಂಡಿ ಬೆಟ್ಟದ ಇತಿಹಾಸ ಪ್ರಸಿದ್ಧವಾದುದು. ಇದೊಂದು ದಿವ್ಯ ಸನ್ನಿಧಿ. ೧೧ನೆಯ ಶತಮಾನದಲ್ಲೇ ಇದನ್ನು ಪುಣ್ಯಕ್ಷೇತ್ರವೆಂದು ಪರಿಗಣಿಸಲಾಗಿತ್ತು. ನಾವು ಆಡುಭಾಷೆಯಲ್ಲಿ 'ಚಾಮುಂಡಿ ಬೆಟ್ಟ' ಎಂದು ಕರೆಯುವ 'ಶ್ರೀ ಚಾಮುಂಡೇಶ್ವರಿ ಬೆಟ್ಟ'ವು ಹಿಂದೆ 'ಶ್ರೀ ಮಹಾಬಲಾದ್ರಿ' ಎಂಬ ಹೆಸರಿನಿಂದ ಪುರಾಣ ಪ್ರಸಿದ್ಧವಾದ ಕ್ಷೇತ್ರವಾಗಿತ್ತು.


ನಂದಿ

'ಚಾಮುಂಡಿ ಬೆಟ್ಟ' ಎಂದ ತಕ್ಷಣ ನಮಗೆ ಸಾಮಾನ್ಯವಾಗಿ ಶಕ್ತಿಸ್ವರೂಪಿಣಿ ಶ್ರೀ ಚಾಮುಂಡೇಶ್ವರಿಯ ಭವ್ಯ ಚಿತ್ರ ಮನದಲ್ಲಿ ಮೂಡುತ್ತದೆ. ಆದರೆ ಈ ಪುಣ್ಯಕ್ಷೇತ್ರದಲ್ಲಿ 'ಮಹಾಬಲೇಶ್ವರ'ನ ಹೆಸರಿನಲ್ಲಿ ಶಿವನೂ ಮತ್ತು 'ಚಾಮುಂಡೇಶ್ವರಿ'ಯ ಹೆಸರಿನಿಂದ ಶಕ್ತಿಯೂ (ಶಿವ-ಶಕ್ತಿ) ವಿರಾಜಮಾನರಾಗಿದ್ದಾರೆ.

ಶಾಸನಗಳಲ್ಲಿ ಚಾಮುಂಡಿಬೆಟ್ಟವನ್ನು ಮಬ್ಬಲದ ತೀರ್ಥ ಅಥವಾ ಮಬ್ಬಳದ ತೀರ್ಥ ಎಂದು ಕರೆಯಲಾಗಿದೆ. ಈ ಬೆಟ್ಟದ ಮೇಲಿರುವ ಮಹಾಬಲೇಶ್ವರ ದೇವಸ್ಥಾನ ಹೊಯ್ಸಳ ವಿಷ್ಣುವರ್ಧನನ ಕಾಲಕ್ಕಿಂತ ಮೊದಲೇ ನಿರ್ಮಿತವಾಗಿತ್ತೆಂಬುದು ನಮಗೆ ತಿಳಿದು ಬರುತ್ತದೆ. ವಿಷ್ಣುವರ್ಧನನ ಕಾಲದಲ್ಲಿ ಈ ಮಬ್ಬಳದ ತೀರ್ಥಕ್ಕೆ ದತ್ತಿ ಬಿಟ್ಟಿದ್ದ ಬಗ್ಗೆ ಶಾಸನಗಳು ಹೇಳುತ್ತವೆ.

ಮೈಸೂರರಸರು ಬೆಟ್ಟದ ಮೇಲಿದ್ದ ಮಹಿಷಾಸುರಮರ್ದಿನಿಯನ್ನು ಚಾಮುಂಡೇಶ್ವರಿ ಎಂಬ ಹೆಸರಿನಿಂದ ತಮ್ಮ ಮನೆದೇವರಾಗಿ ಸ್ವೀಕರಿಸಿದ ಮೇಲೆ ಮಬ್ಬಳ ತೀರ್ಥಕ್ಕೆ 'ಚಾಮುಂಡಿ ಬೆಟ್ಟ' ಎಂಬ ಹೆಸರು ಬಂದಿರಬೇಕು ಎನ್ನಲಾಗಿದೆ. ಅನಂತರ ಅಲ್ಲಿದ್ದ ದೇವಾಲಯಕ್ಕೆ ಪ್ರಾಮುಖ್ಯ ಹೆಚ್ಚಿ ಅದು ವಿಸ್ತಾರವಾಗುತ್ತಾ ಹೋಯಿತು. ದೊಡ್ಡ ದೇವರಾಜ ಒಡೆಯರು ೧೦೦೦ ಮೆಟ್ಟಿಲುಗಳನ್ನು ಕಟ್ಟಿಸಿದರಲ್ಲದೆ ಬೆಟ್ಟದ ಮೇಲೆ ೭೦೦ನೆಯ ಮೆಟ್ಟಿಲಿನ ಹತ್ತಿರ ಅಲ್ಲಿಯೇ ಇದ್ದ ಬಂಡೆಗಲ್ಲೊಂದರಿಂದ ಬೃಹದಾಕಾರದ ನಂದಿಯನ್ನು (ಬಸವ) ಕಡೆಸಿ ಪ್ರತಿಷ್ಠಾಪಿಸಿದರು. ತಲೆ ಎತ್ತಿ ಮಲಗಿರುವ ಈ ನಂದಿಯ ಮೂರ್ತಿ ೧೬ ಅಡಿ ಎತ್ತರವಾಗಿದೆ. ದಷ್ಟಪುಷ್ಟವಾಗಿರುವ ಈ ಬಸವ ಗಂಟೆಸರ, ಗೆಜ್ಜೆಸರ, ಗವುಸುಗಳಿಂದ ಅಲಂಕೃತವಾಗಿದೆ. ಸಹಜ ಮುಖಲಕ್ಷಣಗಳಿಂದ ಕೂಡಿ ತನ್ನ ಬೃಹದ್ಗಾತ್ರದಿಂದ ಅತ್ಯಂತ ಆಕರ್ಷಣೀಯವಾಗಿದೆ.

## ಶ್ರೀ ಮಹಾಬಲೇಶ್ವರ ಸ್ವಾಮಿ ದೇವಾಲಯ

ಈ ದೇವಾಲಯವು ಶ್ರೀ ಚಾಮುಂಡೇಶ್ವರಿ ದೇವಾಲಯದ ದಕ್ಷಿಣ ಭಾಗದಲ್ಲಿದೆ. ಇದು ಪುರಾಣ ಪ್ರಸಿದ್ಧವಾದ ಈಶ್ವರನು ಸ್ವಯಂವ್ಯಕ್ತವಾದ ಪವಿತ್ರ ಸ್ಥಳ. ಈ ದೇವಾಲಯದ ಒಳ ಪ್ರಾಕಾರದ ಹಿಂಭಾಗದಲ್ಲಿ, ಪಶ್ಚಿಮ ಭಾಗದಲ್ಲಿರುವ ಕೈಸಾಲೆಯಲ್ಲಿ ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನಗಳೆಂಬ ಪಂಚಲಿಂಗಗಳೂ, ವಾಯವ್ಯ ದಿಕ್ಕಿನಲ್ಲಿ ಶ್ರೀ ದುರ್ಗಾ ದೇವಿಯ ಆಲಯವೂ, ದಕ್ಷಿಣ ದಿಕ್ಕಿನಲ್ಲಿ ದಕ್ಷಿಣಾಮೂರ್ತಿಯೂ, ಉತ್ತರ ದಿಕ್ಕಿನಲ್ಲಿ ಪಶ್ಚಿಮಾಭಿಮುಖವಾಗಿ ಚಂಡಿಕೇಶ್ವರನ ಸನ್ನಿಧಿಯೂ, ನವರಂಗದಲ್ಲಿ ಉತ್ಸವ ಮೂರ್ತಿಗಳ ಸನ್ನಿಧಿಯೂ, ಗಣಪತಿ ಮತ್ತು ದ್ವಾರಪಾಲಕರ ವಿಗ್ರಹಗಳೂ ಇವೆ. ಒಳಾಂಗಣದಲ್ಲಿ ಸಾಲು ವಿಗ್ರಹಗಳು, ಗಣಪತಿ, ಕ್ಷೇತ್ರಪಾಲ, ಸಪ್ತಮಾತೃಕೆ, ತಾಂಡವೇಶ್ವರ ಲಿಂಗ ಇವೇ ಮೊದಲಾದ ವಿಗ್ರಹಗಳು ಸಹ ಸ್ಥಾಪಿಸಲ್ಪಟ್ಟಿರುತ್ತವೆ. ಈ ದೇವಾಲಯದಲ್ಲಿ ಎರಡು ವೇಳೆಯಲ್ಲೂ ಪೂಜಾದಿಗಳು ನಡೆಯುತ್ತವೆ. ವಿಶೇಷವಾಗಿ ಜ್ಯೇಷ್ಠಮಾಸದಲ್ಲಿ ಗಿರಿಜಾ ಕಲ್ಯಾಣವೂ, ಫಾಲ್ಗುಣಮಾಸದಲ್ಲಿ ರಥೋತ್ಸವವೂ ಅಲ್ಲದೆ ಆರ್ದ್ರೋತ್ಸವ, ಕೃತ್ತಿಕೋತ್ಸವ ಇವೇ ಮೊದಲಾದ ಉತ್ಸವಗಳು ನಡೆಯುತ್ತವೆ.



ಶ್ರೀಚಾಮುಂಡೇಶ್ವರಿ ಅಮ್ಮನವರ ಮೂಲವಿಗ್ರಹ

## ಶ್ರೀ ಚಾಮುಂಡೇಶ್ವರಿ ದೇವಾಲಯ

ಚಾಮುಂಡೇಶ್ವರಿ ದೇವಾಲಯವು ದ್ರಾವಿಡ ಶೈಲಿಯಲ್ಲಿ ಕಟ್ಟಿರುವ, ತಕ್ಕಮಟ್ಟಿಗೆ ದೊಡ್ಡದಾದ ದೇವಾಲಯ. ಮೂಲ ದೇವಾಲಯದ ನಿರ್ಮಾಣ ಕಾಲವನ್ನು ತಿಳಿಯಲು ಈಗ ಆಧಾರಗಳಿಲ್ಲ. ಮುಮ್ಮಡಿ ಕೃಷ್ಣರಾಜ ಒಡೆಯರು ಇದನ್ನು ನವೀಕರಿಸಿ ಇದರ ಮಹಾದ್ವಾರಕ್ಕೆ ಒಂದು ಸುಂದರವಾದ ಗೋಪುರವನ್ನು ಕಟ್ಟಿಸಿದರು. ನಂಜನಗೂಡು, ಚಾಮರಾಜನಗರ, ಮೈಸೂರುಗಳಲ್ಲಿ ಇವರು ಕಟ್ಟಿಸಿದ ಗೋಪುರಗಳಂತೆಯೇ ಇಟ್ಟಿಗೆ ಗಾರೆಯಲ್ಲಿ ಇದನ್ನು ಕಟ್ಟಲಾಗಿದೆ.

ಈ ದೇವಾಲಯದ ಮಹಾದ್ವಾರದ ಗೋಪುರವು ಏಳು ಅಂತಸ್ತುಗಳಿಂದ ಕೂಡಿದ್ದು ಏಳು ಚಿನ್ನದ ಕಲಶಗಳಿಂದ ಕೂಡಿರುತ್ತದೆ. ಮಹಾದ್ವಾರದ ಕೆಳಭಾಗದಲ್ಲಿ ಇಂದ್ರಾದಿ ಅಷ್ಟದಿಕ್‌ಪಾಲಕರ ವಿಗ್ರಹಗಳು ಇರುತ್ತವೆ. ಮಹಾದ್ವಾರದಲ್ಲಿ ದಕ್ಷಿಣಾಭಿಮುಖವಾಗಿ ಮಹಾಗಣಪತಿಯ ವಿಗ್ರಹವು ಸ್ಥಾಪಿಸಲ್ಪಟ್ಟಿದೆ. ಹಾಗೂ ದೇವಿಯ ಮುಂಭಾಗದಲ್ಲಿ ಬೆಳ್ಳಿ ಧ್ವಜಸ್ತಂಭ, ಬಲಿ ಪೀಠ ಇವುಗಳಿವೆ. ಪ್ರವೇಶ ದ್ವಾರದಲ್ಲಿ ನಂದಿನಿ ಮತ್ತು ಕಮಲಿನಿ ಎಂಬ ದ್ವಾರ ಪಾಲಿಕೆಯರ ವಿಗ್ರಹಗಳಿವೆ. ಧ್ವಜಸ್ತಂಭಕ್ಕೆ ಈಶಾನ್ಯದಲ್ಲಿ ಆಂಜನೇಯನ ವಿಗ್ರಹವಿದೆ. ದೇವಿಯ ವಿಮಾನದಲ್ಲಿ ಚಿನ್ನದ ಕಲಶವಿದ್ದು, ಈ ದೇವಾಲಯದಲ್ಲಿ ಏಳು ದ್ವಾರಗಳಿವೆ.

ಮಹಾದ್ವಾರದ ಹೊರಗೆ ನಿಂತು ನೋಡಿದರೂ ಸಹ ಒಳಗೆ ಸನ್ನಿಧಿಯಲ್ಲಿ ವಿರಾಜಮಾನಳಾದ ಶ್ರೀಚಾಮುಂಡೇಶ್ವರಿ ದೇವಿಯ ದರ್ಶನದ ವೈಖರಿಯು ವರ್ಣನಾತೀತ. ನವರಂಗದಿಂದ ಒಳಗೆ ಪ್ರವೇಶಿಸಿದರೆ ದೇವಿಯ ಬಲಭಾಗದಲ್ಲಿ ಮುದ್ದಾದ ಗಣಪತಿ ವಿಗ್ರಹವೂ ಎಡಭಾಗದಲ್ಲಿ ಭೈರವ ದೇವರ ವಿಗ್ರಹವೂ ಕಂಗೊಳಿಸುತ್ತವೆ. ಈ ಭೈರವ ದೇವರ ಎಡಭಾಗದಲ್ಲಿ ವಿಜೃಂಭಣೆಯಿಂದ ಮೆರೆಯುವ ಪಂಚಲೋಹದ ಉತ್ಸವಮೂರ್ತಿಯ ವಿಗ್ರಹವಂತೂ ಅತಿ ಸುಂದರವಾಗಿ ಪ್ರಕಾಶಿಸುತ್ತಾ ದಕ್ಷಿಣಾಭಿಮುಖವಾಗಿ ಕಂಗೊಳಿಸುತ್ತದೆ. ಈ ಉತ್ಸವಮೂರ್ತಿಗೆ ಅಭಿಮುಖವಾಗಿ ಭಕ್ತಿ ಭಾವಗಳಿಂದ ಕೂಡಿ ನಿಂತಿರುವ ಮುಮ್ಮಡಿ ಕೃಷ್ಣರಾಜ ಒಡೆಯರ ಶಿಲಾಪ್ರತಿಮೆ ಮತ್ತು ರಾಣಿ ವಿಲಾಸದ ಪಟ್ಟಮಹಿಷಿಯರ ಶಿಲಾ ಪ್ರತಿಮೆಗಳು ಕಂಗೊಳಿಸುತ್ತವೆ. ಗರ್ಭಗುಡಿಯಲ್ಲಿ ಮಹಿಷ ಮರ್ದಿನಿಯಾದ ಶ್ರೀ ಚಾಮುಂಡೇಶ್ವರಿಯು ಅಷ್ಟಭುಜಗಳಿಂದ ಕೂಡಿದವಳಾಗಿ ವಿರಾಜಮಾನಳಾಗಿದ್ದಾಳೆ. ಈ ಶಿಲಾಮೂರ್ತಿಯನ್ನು ಮಾರ್ಕಂಡೇಯ ಋಷಿಗಳು ಸ್ಥಾಪಿಸಿದರೆಂದು ತಿಳಿದು ಬರುತ್ತದೆ.

ಚಾಮುಂಡೇಶ್ವರಿ ದೇವಿಯು ಮಹಿಷಾಸುರನೆಂಬ ರಾಕ್ಷಸನನ್ನು ಸಂಹರಿಸಿ ಮಹಿಷಾಸುರಮರ್ದಿನಿಯೆಂದೂ, ಚಂಡಮುಂಡಾಸುರರೆಂಬ ದೈತ್ಯರನ್ನು ಸಂಹರಿಸಿ ಚಾಮುಂಡಾ ಎಂದೂ ಕರೆಯಲ್ಪಟ್ಟಿದ್ದಾಳೆ. ಚಾಮುಂಡೇಶ್ವರಿ ದೇವಿಯನ್ನು ಹಲವು ಹೆಸರುಗಳಿಂದ ಪೂಜಿಸುತ್ತಾರೆ. ಚಂಡಿ, ಚಾಮುಂಡಿ, ಅಂಬೆ, ಜಗದಂಬೆ, ಜಗನ್ಮಾತೆ, ಜಗಜ್ಜನನಿ, ದುರ್ಗಾ, ಕಾಳಿ, ಮುಂತಾದ ಇನ್ನೂ ಅನೇಕ ಹೆಸರುಗಳಿವೆ. ಬ್ರಹ್ಮ, ವಿಷ್ಣು, ಮಹೇಶ್ವರರೆಂಬ ತ್ರಿವಿಧಶಕ್ತಿ ರೂಪಿಣಿಯಾದ ಶ್ರೀ ಚಾಮುಂಡೇಶ್ವರಿಯು ರಾಜಮಹಾರಾಜರುಗಳ ಕುಲದೇವತೆಯಾಗಿದ್ದವಳು.

ಚಾಮುಂಡಿ ಬೆಟ್ಟ



## ರಾಜಮನೆತನಕ್ಕೆ ಚಾಮುಂಡೇಶ್ವರಿಯು ಕುಲದೇವತೆಯಾಗಲು ಕಾರಣ



ಅಮ್ಮನವರ ಉತ್ಸವಮೂರ್ತಿ

ಮೈಸೂರು ರಾಜವಂಶಕ್ಕೆ ಮೂಲಪುರುಷರು ಯದುರಾಯರು. ಜನನ—ಶಾಲಿವಾಹನ ಶಕ ೧೨೯೩ (ಕ್ರಿ.ಶ. ೧೩೭೧). ರಾಜಮನೆತನಕ್ಕೆ ಚಾಮುಂಡೇಶ್ವರಿಯು ಕುಲದೇವತೆಯಾಗಲು, ಆ ದೇವಿಯು ಇವರಿಗೆ ಕನಸಿನಲ್ಲಿ ಮತ್ತು ತಪಸ್ಸಿನಲ್ಲಿ ಕಾಣಿಸಿಕೊಂಡುದು ಮತ್ತು ನಂತರದ ಘಟನೆಗಳು ಕಾರಣ ಎನ್ನಲಾಗಿದೆ. ಶ್ರೀಚಾಮುಂಡೇಶ್ವರಿ ದೇವಿಗೆ ವಿಶೇಷ ಸೇವೆ ಸಲ್ಲಿಸಿರುವ ಇತರ ಮೈಸೂರು ಮಹಾರಾಜರುಗಳೆಂದರೆ ಅನುಕ್ರಮವಾಗಿ, ಹಿರಿಯಬೆಟ್ಟ ಚಾಮರಾಜ ಒಡೆಯರು, ಬೋಳ ಚಾಮರಾಜ ಒಡೆಯರು, ರಾಜ ಒಡೆಯರು, ರಣಧೀರ ಕಂಠೀರವ ನರಸರಾಜ ಒಡೆಯರು, ದೊಡ್ಡ ದೇವರಾಜ ಒಡೆಯರು, ಚಿಕ್ಕ ದೇವರಾಜ ಒಡೆಯರು, ದೊಡ್ಡ ಕೃಷ್ಣರಾಜ ಒಡೆಯರು, ಮುಮ್ಮಡಿ ಕೃಷ್ಣರಾಜ ಒಡೆಯರು, ಚಾಮರಾಜ ಒಡೆಯರು, ನಾಲ್ವಡಿ ಕೃಷ್ಣರಾಜ ಒಡೆಯರು ಮತ್ತು ಜಯಚಾಮರಾಜ ಒಡೆಯರು. ಈ ಮಹಾರಾಜರುಗಳು ತಮ್ಮ ಕುಲದೇವತೆಯಾದ ಶ್ರೀಚಾಮುಂಡೇಶ್ವರಿಯ ದೇವಾಲಯದ ಜೀರ್ಣೋದ್ಧಾರವನ್ನು ಮಾಡಿ, ಅತೀ ಹೆಚ್ಚಾದ ಸೇವೆಗಳನ್ನು ಮಾಡುತ್ತಾ ಚಿನ್ನ, ಬೆಳ್ಳಿ, ವಜ್ರ, ವೈಢೂರ್ಯ, ಮುತ್ತು-ರತ್ನ ಆಭರಣಗಳು, ಪಾತ್ರೆ-ಪದಾರ್ಥಗಳನ್ನು ಅಮ್ಮನವರಿಗೆ ಅರ್ಪಿಸಿ ಕೃತಾರ್ಥರಾಗಿ ಕೀರ್ತಿಶೇಷರಾಗಿದ್ದಾರೆ.

ಪ್ರತಿ ನಿತ್ಯವೂ ಇಲ್ಲಿ ಎರಡು ಹೊತ್ತೂ ಅಭಿಷೇಕ, ಪೂಜೆಗಳು ಸಂಪ್ರದಾಯಬದ್ಧವಾಗಿ ನಡೆಯುವಂತೆ ಏರ್ಪಾಡು ಮಾಡಿರುತ್ತಾರೆ. ಪೂಜಾದಿ ನಿತ್ಯ ಸೇವೆಗಳು, ವಿಶೇಷವಾದ ಉತ್ಸವಾದಿಗಳು ವಿಜೃಂಭಣೆಯಿಂದ ಶಾಸ್ತ್ರೋಕ್ತವಾಗಿ ಈಗಲೂ ನಡೆಯುತ್ತಿರುವುದು ನಮಗೆ ತಿಳಿದು ಬರುತ್ತದೆ. ಚಾಮುಂಡೇಶ್ವರಿ ಅಮ್ಮನವರಿಗೆ ಆಶ್ವಯುಜ ಮಾಸದ ಶರನ್ನವರಾತ್ರಿ (ದಸರಾ) ಉತ್ಸವವು ಬಹಳ ವಿಶೇಷವಾಗಿ ನಡೆಯುತ್ತದೆ. ಈ ದೇವತೆಗೆ ನಡೆಯುವ ರಥೋತ್ಸವ ಹಾಗೂ ತೆಪ್ಪೋತ್ಸವವು ದೇಶ, ವಿದೇಶಗಳಲ್ಲಿಯೂ ಪ್ರಖ್ಯಾತಿ ಪಡೆದಿದೆ. ಈ ರಥೋತ್ಸವದ ಸಂದರ್ಭದಲ್ಲಿ ರಾಜಮನೆತನದವರು ಖುದ್ದಾಗಿ ಬಂದು ರಥವನ್ನು ಸ್ವಲ್ಪ ದೂರ ಎಳೆದುಬರುವ ಸನ್ನಿವೇಶವು ಬಲು ಆನಂದದಾಯಕ. ಹಿಂದೆ ಮೈಸೂರು ಮಹಾರಾಜರುಗಳ ಮೇಲ್ವಿಚಾರಣೆಯಲ್ಲಿ ಸೇವೆಗಳು ವಿಜೃಂಭಣೆಯಿಂದ ನಡೆಯುತ್ತಿದ್ದುವು. ಪ್ರಜಾಪ್ರಭುತ್ವ ಸ್ಥಾಪನೆಗೊಂಡಮೇಲೆ, ಈಚೆಗೆ ಇದು ಕರ್ನಾಟಕ ಸರ್ಕಾರದ ಧಾರ್ಮಿಕ ದತ್ತಿ ಇಲಾಖೆಯ ಆಡಳಿತ ಸಮಿತಿಯ ಮೇಲ್ವಿಚಾರಣೆಗೆ ಒಳಪಟ್ಟು, ಆ ಮೂಲಕ ಸೇವಾಕಾರ್ಯಗಳು ನಡೆಯುತ್ತಿವೆ.

ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಸ್ಥಾನ, ಶ್ರೀ ಮಹಾಬಲೇಶ್ವರ ದೇವಸ್ಥಾನ, ಲಕ್ಷ್ಮೀನಾರಾಯಣ ಸ್ವಾಮಿ ದೇವಸ್ಥಾನ, ಮಹಿಷಾಸುರ ಪ್ರತಿಮೆ, ದೊಡ್ಡ ಬಸವ (ನಂದಿ), ದೇವಿಕೆರೆ ಮಾರ್ಕಂಡೇಯ ಆಶ್ರಮ, ನಾಗತೀರ್ಥ, ಕೋಣನಕೆರೆ, ಉತ್ತನಹಳ್ಳಿ ಜ್ವಾಲಾತ್ರಿಪುರಸುಂದರಿ ಅಮ್ಮನವರ ದೇವಸ್ಥಾನ—ಇವು ಇಲ್ಲಿನ ಪ್ರೇಕ್ಷಣೀಯ ಸ್ಥಳಗಳಾಗಿವೆ.

ಶ್ರೀ ಚಾಮುಂಡೇಶ್ವರಿ ಅಮ್ಮನವರ ಜನ್ಮೋತ್ಸವ, ರಥೋತ್ಸವ, ತೆಪ್ಪೋತ್ಸವ, ಶಯನೋತ್ಸವ, ಮುಡಿಉತ್ಸವ, ವಸಂತೋತ್ಸವ, ಪ್ರಾಸಾದೋತ್ಸವ, ಫಲಪೂರ್ಣಿಮಾ ಉತ್ಸವ, ಶರನ್ನವರಾತ್ರಿ ಉತ್ಸವ, ಕೃತ್ತಿಕೋತ್ಸವ, ಕೊಠಾರೋತ್ಸವ ಮತ್ತು ಶ್ರೀ ಚಾಮುಂಡೇಶ್ವರಿ ಅಮ್ಮನವರ ಜಾತ್ರೆ, ಅಲ್ಲದೆ ಮಹಾಬಲೇಶ್ವರ ದೇವಾಲಯದಲ್ಲಿ ಗಿರಿಜಾ ಕಲ್ಯಾಣ ಮತ್ತು ರಥೋತ್ಸವ ಹಾಗೂ ಕನ್ನಾಕನ್ನಡಿ ಉತ್ಸವಗಳು ಪ್ರಮುಖವಾದವುಗಳು.

### ಚಾಮುಂಡಿ ಬೆಟ್ಟ—ಪ್ರವಾಸ ಶಿಕ್ಷಣದ ತಾಣ

ನಾಸ್ತಿಕರೂ, ದೇಶ-ವಿದೇಶಗಳ ಪ್ರವಾಸಿಗಳೂ, ರಾಜ್ಯ ಹಾಗೂ ದೇಶದ ಶಾಲಾ-ಕಾಲೇಜುಗಳ ವಿದ್ಯಾರ್ಥಿ-ವಿದ್ಯಾರ್ಥಿನಿಯರು, ಶಿಕ್ಷಕ-ಶಿಕ್ಷಕಿಯರು ಇವರುಗಳಿಗೆಲ್ಲ ಚಾಮುಂಡಿ ಬೆಟ್ಟವು ನೋಡಲೇಬೇಕಾದ ಒಂದು ಪ್ರವಾಸಿ ತಾಣವಾಗಿಬಿಟ್ಟಿದೆ. ಇವರು ಕಾಲು ನಡಿಗೆಯಿಂದ ಬೆಟ್ಟದ ಮೆಟ್ಟಿಲುಗಳನ್ನು ಹತ್ತಿಯೋ ಅಥವಾ ಕಾರು, ಟೆಂಪೋ, ಬಸ್ಸು ಮುಂತಾದವುಗಳಲ್ಲಿ, ಸಂತೋಷ ಹಾಗೂ ಸಂಭ್ರಮಗಳಿಂದ ಬಂದು ಚಾಮುಂಡಿಬೆಟ್ಟವನ್ನು ವೀಕ್ಷಿಸುತ್ತಾರೆ. ನಂತರ ಬೆಟ್ಟದ ಮೇಲೆ ನಿಂತು ವಿಶ್ವವಿಖ್ಯಾತ ಮೈಸೂರು ನಗರದ ಸುಂದರ ನೋಟವನ್ನು ನೋಡಿ ಆನಂದಪಡುತ್ತಾರೆ. ರಾತ್ರಿಯ ಹೊತ್ತಿನಲ್ಲಿ ಬೆಟ್ಟದ ಮೇಲಿಂದ ನೋಡಿದಾಗ ಮೈಸೂರು ನಗರವು ಲಕ್ಷೋಪಲಕ್ಷ ವಿದ್ಯುದ್ದೀಪಗಳ ಸಾಗರದಿಂದ ಜಗಜಗಿಸುತ್ತದೆ; ಇದು ದೆಹಲಿ, ಮುಂಬೈ ಅಥವಾ ಪ್ಯಾರಿಸ್ ನಗರ ಇರಬಹುದೇನೋ ಎಂಬ ಭ್ರಮಾಲೋಕಕ್ಕೆ ನಮ್ಮನ್ನು ಕೊಂಡೊಯ್ಯುತ್ತದೆ. ನವರಾತ್ರಿಯ ಕಾಲದಲ್ಲಿ ನಡೆಯುವ ತೆಪ್ಪೋತ್ಸವ ಹಾಗೂ ಬಾಣ-ಬಿರುಸುಗಳ ಪ್ರದರ್ಶನ ವರ್ಣರಂಜಿತವಾಗಿ ಮನಮೋಹಕವಾಗಿರುತ್ತವೆ.

### ಮಾತನಾಡಿಸುವ ಮಂಗಣ್ಣಗಳು! ಪ್ರೀತಿಯಿಂದ ನಿಲ್ಲುವ ಹಸುಗಳು!

ದೇವಾಲಯದಿಂದ ಹೊರವಲಯದಲ್ಲಿ ಹಾಗೂ ನಂದಿಯ ಸಮೀಪದಲ್ಲಿ ಬೆಟ್ಟದ ಮಂಗಗಳು ಹಿಂಡು ಹಿಂಡಾಗಿ ಬರುತ್ತವೆ. ಮಕ್ಕಳು ಮರಿಗಳನ್ನು, ಕೆಲವು ವೇಳೆ ದೊಡ್ಡವರನ್ನೂ ಹೆದರಿಸುತ್ತವೆ. ತಿಂಡಿ ಕೊಟ್ಟರೆ ಸುಮ್ಮನಾಗುತ್ತವೆ. ಕೊಡದಿದ್ದರೆ ನಮಗೆ ಕಾಣದ ಹಾಗೆ ಬಂದು, ಹಣ್ಣು-ಕಾಯಿ, ತಿಂಡಿ-ತೀರ್ಥ, ಪ್ರಸಾದ ಮುಂತಾದುವುಗಳನ್ನು ನಮ್ಮಿಂದ ಕಿತ್ತುಕೊಂಡೋ, ಎಗರಿಸಿಕೊಂಡೋ ಹೋಗುತ್ತವೆ. ದೂರದಲ್ಲಿ ಹೋಗಿ ತಿನ್ನುತ್ತಾ ತಿನ್ನುತ್ತಾ, ಮತ್ತೆ ನಮ್ಮನ್ನೇ ನೋಡಿ ಕಣ್ಣಂಚಿನಿಂದಲೇ ನಮ್ಮನ್ನು ಮಾತನಾಡಿಸುತ್ತವೆ! ಅಲ್ಲಲ್ಲಿ ಅಡ್ಡಾಡುವ ಎತ್ತುಗಳು-ಹಸು-ಕರುಗಳು ಜನರ ಬಳಿ ಬಂದು ಕೊಟ್ಟ ಹಣ್ಣು-ಕಾಯಿಗಳನ್ನು ತಿಂದು, ತಲೆ ಅಲ್ಲಾಡಿಸುತ್ತಾ ಪ್ರೀತಿಯಿಂದ ನಮ್ಮ ಬಳಿ ನಿಲ್ಲುತ್ತವೆ! ಈ ದೃಶ್ಯಗಳು ಮಕ್ಕಳು-ವಿದ್ಯಾರ್ಥಿಗಳಿಗಂತೂ ಬಹಳ ಖುಷಿ ಕೊಡುತ್ತವೆ. ಪ್ರವಾಸಿ ಶಿಕ್ಷಣದಲ್ಲಿ ಚಾಮುಂಡಿ ಬೆಟ್ಟವು ಬಹಳ ಪ್ರಾಮುಖ್ಯತೆ ಪಡೆದಿದೆ.ಒಟ್ಟಿನಲ್ಲಿ ಚಾಮುಂಡಿ ಬೆಟ್ಟದ ದರ್ಶನಾನುಭವ ನಮಗೆ ಅಪೂರ್ವ, ಅವಿಸ್ಮರಣೀಯ ಹಾಗೂ ಆನಂದದಾಯಕವೆನ್ನಬಹುದು. ✡